**ದಿನಾಂಕಃ 09/09/2025 ರಂದು ಅಸಾಃ5 ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ SPA ವಕೀಲರಿಂದಃ**

ನಮ್ಮ ಗ್ರಾಮದಿಂದ ಎಡವನಹಳ್ಳಿ ಗ್ರಾಮ ಅರ್ಧ ಕಿ.ಮೀ ಆಗುತ್ತದೆ. ಜಾಗದ ಸುತ್ತಮುತ್ತಲು ಪೊದೆ ಇದ್ದು ಪಕ್ಕದಲ್ಲಿ ಜೋಳ ಇರುತ್ತದೆ ಎಂದರೆ ಸರಿ. ಹೊಲದಲ್ಲಿ ಜೋಳ ಬೆಳೆಯುತ್ತಾರೆ ಎಂದರೆ ಸರಿ. ನನ್ನನ್ನು ಗಲಾಟೆಯ ವಿಚಾರಕ್ಕೆ ಊರಿನವರು ಕರೆದರು. ನಾನು ಹೋದ ಮೇಲೆ ತುಂಬಾ ಜನರು ಸ್ಥಳದಲ್ಲಿ ಸೇರಿದ್ದರು. ಮಹಜರಿಗೆ ಡಿವೈಎಸ್‌ಪಿ ರವರು ಸಾಕ್ಷಿಗೆ ಸಹಿ ಮಾಡಲು ಹೇಳಿದ್ದರು ಅದಕ್ಕೆ ಸಹಿ ಮಾಡಿರುತ್ತೇನೆ. ಮಹಜರಿನಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ. ಒಂದು ಕೆಂಪು ವೇಲ್ ನ್ನು, ಚಪ್ಪಲಿಯನ್ನು ಅಮಾನತುಪಡಿಸಿಕೊಂಡರು. ಚಪ್ಪಲಿ ಹಾಗಾ ಬಟ್ಟೆ 5 ಅಡಿ ದೂರದಲ್ಲಿತ್ತು. ಚಪ್ಪಲಿಯಲ್ಲಿಯ ಯಾವ ಕಂಪನಿ ಎಂದು ನಾನು ನೋಡಿಲ್ಲ. ವೇಲ್ ನಲ್ಲಿ ಏನಾದರೂ ಕಂಪನಿ ಬಗ್ಗೆ ಇತ್ತಾ ಎಂದು ನೋಡಿಲ್ಲ, ದೂರದಿಂದ ನಾನು ನೋಡಿರುತ್ತೇನೆ. ಚಾಸಾ-1 ಮತ್ತು 2 ರವರು ಗೊತ್ತು ಅವರು ನಮ್ಮ ಊರಿನವರು. ಪೊಲೀಸರು ಮಹಜರಿಗೆ ಬೇರೆ ಯಾರ ಸಹಿ ಹಾಕಿಸಿದ್ದಾರೆ ಎಂದು ಗೊತ್ತಿಲ್ಲ.

(ನನ್ನ ಉಕ್ತಲೇಖನಕಲ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಪು

ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ